ಪ್ರಭಾವಿಸಿತು. ಇಂಥ ಎಲ್ಲ ಸಾಧಕ ಕವಿಗಳ ಓದು ನನ್ನನ್ನು ಆಗ ಬಲವಾಗಿ ಹಿಡಿಯಿತು. ಇವರ ಮೂಲಕ, ಆ ಸಂದರ್ಭದಲ್ಲಿ ಒಂದು ಪ್ರಮುಖ ಪ್ರಸ್ಥಾನವಾಗಿ ಸಾಹಿತ್ಯ ವಲಯವನ್ನು ನಿರ್ದೇಶಿಸುತ್ತಿದ್ದ ನವೋದಯವು ನನ್ನ ಚಿಂತನೆ ಮತ್ತು ಬರಹಗಳಿಗೆ ಸದೃಢವಾದ ಬುನಾದಿಯನ್ನು ಹಾಕಿತು. ಬುನಾದಿ ಬಿದ್ದ ಮೇಲೆ ಕಟ್ಟಡ ತಂತಾನೆ ಭದ್ರವಾಗಿ ಏಳುವಂತೆ ನವೋದಯ ನನಗೆ ಆಧಾರಸ್ತಂಭವಾಯಿತು. ಇದರ ಜೊತೆಗೆ ನಾನು ಪ್ರಾಚೀನ ಮತ್ತು ಮಧ್ಯಕಾಲೀನ ಸಾಹಿತ್ಯವನ್ನೂ ಅಷ್ಟೇ ಆಸ್ಥೆಯಿಂದ ಓದಿದೆ.

● **ಹಲಸಂಗಿ ಮತ್ತು ಹಲಸಂಗಿ ಚೆನ್ನಮಲ್ಲಪ್ಪ (ಮಧುರಚೆನ್ನ) ಅವರು ನಿಮ್ಮ ವ್ಯಕ್ತಿತ್ವದ ಒಂದು ಪ್ರಮುಖ ಭಾಗವೇ ಆದದ್ದು ಹೇಗೆ? ಅದರ ಪರಿಣಾಮ ಏನಾಯ್ತು?**

ಹಲಸಂಗಿ ನನ್ನ ತವರುಮನೆ. ಅದರ ವಾತ್ಸಲ್ಯ ಅನನ್ಯ. ಸಣ್ಣ ಹುಡುಗನನ್ನು ಕೈಹಿಡಿದು ನಡಸುವಂತೆ ಮಧುರಚೆನ್ನರು ತಂದೆ, ತಾಯಿ, ಗುರು ಏನೆಲ್ಲ ಆಗಿ ನನ್ನನ್ನು ಎಬ್ಬಿಸಿ ನಿಲ್ಲಿಸಿ, ಎಲ್ಲಿಯೂ ಜೋಲಿ ಹೋಗದಂತೆ ನಡೆಯಲು ಕಲಿಸಿದರು. ನಾನು ಒಂದಿಷ್ಟು ನಡೆಯುವಂತಾಗಲು ಅವರ ಪಿತೃವಾತ್ಸಲ್ಯವೇ ಕಾರಣ. ಮಧುರಚೆನ್ನರದು ಭಕ್ತಿಪೂರ್ಣ ಜೀವನ. ಅವರ ಮೇಲೆ ಮೂಲತಃ ಬಸವಣ್ಣನವರ ಪ್ರಭಾವವಿರುವುದನ್ನು ಕಾಣಬಹುದು. ಅರವಿಂದರನ್ನು ಅರಿಯುವ ಪೂರ್ವದಲ್ಲಿ ಅವರು ಶರಣರನ್ನೇ ತಿಳಿದುಕೊಂಡವರು. ಅವರೇ ಹೇಳಿಕೊಂಡಂತೆ, ಅವರ ಮುಖ್ಯ ಸಾಧನೆ ಷಟಸ್ಥಲದ ಮೂಲಕವೇ ನಡೆದದ್ದು. "ಭಕ್ತ, ಮಹೇಶ, ಪ್ರಸಾದಿ ಸ್ಥಲಕ್ಕೆ ಬಂದಿದ್ದೇನೆ, ಮುಂದಿನ ಸ್ಥಲಗಳಿಗೂ ಸಾಗಬೇಕು..." ಎಂದು ಅವರು ತಮ್ಮ 'ಆತ್ಮಶೋಧನೆ' ಯಲ್ಲಿ ಹೇಳಿಕೊಂಡಿದ್ದಾರೆ. ಅರವಿಂದರ ಪ್ರಭಾವವಾದ ಮೇಲೆ ಮಧುರಚೆನ್ನರು ಶರಣರ ಸಾಧನೆ ಮತ್ತು ಅರವಿಂದರ ಪೂರ್ಣಯೋಗದ ಸಾಧನೆಯನ್ನು ಸಮನ್ವಯಗೊಳಿಸುವ ಕಾರ್ಯ ಮಾಡಿದರು. ನೇರವಾಗಿ ಅರವಿಂದರ ದರ್ಶನಾಶೀರ್ವಾದ ಪಡೆದ ಮಧುರಚೆನ್ನರು, ಅವರ ಮೂಲಕ ತಾವು ಕಂಡ ಅನುಭಾವ ದರ್ಶನವನ್ನು ತಮ್ಮ ಮುಂದಿನವರಿಗೆ, ಅಂದರೆ ನಮ್ಮಂಥವರಲ್ಲಿಯೂ ಬಿತ್ತಿದರು. ಹೀಗಾಗಿ ಅವರ ವ್ಯಕ್ತಿತ್ವವೇ ನಮಗೊಂದು ಮಾದರಿಯಾಯಿತು; ಮಾರ್ಗವಾಯಿತು. ಆ ಮಾರ್ಗವು ಒಂದು ದೃಷ್ಟಿಯಿಂದ ನಮಗೆ ರಾಜಮಾರ್ಗವಾಯಿತು. ಅಲ್ಲಿಂದ ಮುಂದೆ ಅದು ತಂತಾನೇ ಕೈಹಿಡಿದು ಕರೆದೊಯ್ಯಿತು. ಉಳಿದದೆಲ್ಲ ಶಬ್ದದಾಚೆಯ ನಿಶ್ಯಬ್ದ.

● **ಹಲಸಂಗಿಯ 'ಗೆಳೆಯರ ಗುಂಪು' ಆ ಕಾಲದಲ್ಲಿ ಉಂಟು ಮಾಡಿದ ಸಂಚಲನೆ ಎಂಥದ್ದು? ಆ ಗುಂಪಿನ ಗೆಳೆಯರ ಸ್ನೇಹದ ಸ್ವರೂಪ ಹೇಗಿತ್ತು? ಮತ್ತು ಅವರ ಗುಂಪಿನ ಉದ್ದೇಶ ಏನಿತ್ತು?**

ಹಲಸಂಗಿ ಗೆಳೆಯರು ಸ್ವತಂತ್ರವಾಗಿ ಬೆಳೆದರೂ, ಬೇಂದ್ರೆಯವರ ಧಾರವಾಡ ಗೆಳೆಯರ ಗುಂಪಿನ ಗೆಳೆಯರಾಗಿಯೇ ಉಳಿದರು. ಆ ಗೆಳೆಯರಲ್ಲಿ ವೈವಿಧ್ಯತೆ ಇತ್ತು. ರೇವಪ್ಪ ಸ್ವಾತಂತ್ರ್ಯಪ್ರೇಮಿ, ಸೆರೆಮನೆವಾಸ ಅನುಭವಿಸಿದವರು. ಅವರು ಬಾಲಕವಿಯಾಗಿ, ಕತೆಗಾರರಾಗಿ, ಕಾದಂಬರಿಕಾರರಾಗಿ ಬರವಣಿಗೆ ಮಾಡಿದ್ದರೂ ಕಲಾವಿದರಾಗಿ ಉಳಿದರು. ಪಿ. ಧೂಲಾ ಆದರ್ಶವಾದಿ, ಜನಹಿತಚಿಂತಕ, ಜೊತೆಗೆ ಕವಿ. ಸಿಂಪಿ ಲಿಂಗಣ್ಣ ರಾಷ್ಟ್ರಪ್ರಶಸ್ತಿ ಪಡೆದ ಆದರ್ಶ ಶಿಕ್ಷಕ, ಜಾನಪದ ತಜ್ಞ, ವಿವಿಧ ಬಗೆಯ ಸಾಹಿತ್ಯ ಸೃಷ್ಟಿಮಾಡಿದ, ವಿಶ್ವವಿದ್ಯಾಲಯದ ಡಿ.ಲಿಟ್. ಪದವಿ ಪಡೆದ, ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಲನದ ಅಧ್ಯಕ್ಷರಾದ ಗಣ್ಯಸಾಹಿತಿ.

ಮಧುರಚೆನ್ನರು 'ಸತ್ಯದ ಭಕ್ತರು. ಗ್ರಹಿಕೆಯ ದಾಸರಲ್ಲ'. ಅವರ ಜೀವನದ ಧ್ಯೇಯ ಹೊಂದಾಣಿಕೆಯೇ ಹೊರತು ವಿಚ್ಛೇದನವಲ್ಲ. ಮಧುರಚೆನ್ನ 'ಗಣಸಹಿತ ಕೈಲಾಸ ಕಾಣುವ